# ಕರ್ನಾಟಕ ರಾಜ್ಯಪತ್ರ

**ಅಧಿಕೃತವಾಗಿ ಪ್ರಕಟಿಸಲಾದುದು**

## ವಿಶೇಷ ರಾಜ್ಯ ಪತ್ರಿಕೆ

| ಭಾಗ – ೪ಎ<br>Part – IVA | ಬೆಂಗಳೂರು, ಬುಧವಾರ, ೨೮, ಆಗಸ್ಟ್, ೨೦೨೪(ಭಾದ್ರಪದ, ೦೬, ಶಕವರ್ಷ, ೧೯೪೬)<br>BENGALURU, WEDNESDAY, 28, AUGUST, 2024(BHADRAPADA, 06, SHAKAVARSHA, 1946) | ನಂ. ೪೧೪<br>No.414 |
|---|---|---|


**ಕರ್ನಾಟಕ ಸರ್ಕಾರ**

ಸಂಖ್ಯೆ: ಇ-ಆರ್‌ಡಿ 21 ಆರ್‌ಇಹೆಚ್ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:28.08.2024

## ಅಧಿಸೂಚನೆ

ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 2009 (2009ರ ಕರ್ನಾಟಕಅಧಿನಿಯಮ ಸಂಖ್ಯೆ 10ರ ಪ್ರಕರಣ 45(1) ರ ಮೂಲಕ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ಈ ಕೆಳಕಂಡ ನಿಯಮಗಳ ಕರಡು ಪ್ರತಿಯನ್ನುಸರ್ಕಾರದ ಅಧಿಸೂಚನೆ ಸಂಖ್ಯೆ ಆರ್ ಡಿ 21 ಆರ್‌ಇಹೆಚ್ 2020, ದಿನಾಂಕ:01.03.2024 ರಂದು ಕರ್ನಾಟಕ ರಾಜ್ಯ ಪತ್ರದ ಭಾಗ-iV ರಲ್ಲಿ ದಿನಾಂಕ:13.03.2024 ರಲ್ಲಿ ಈ ನಿಯಮಗಳಿಂದ ಬಾಧಿತರಾದ ಯಾವುದೇ ವ್ಯಕ್ತಿಯು, ಅವರ ಆಕ್ಷೇಪಣೆಗಳನ್ನು ಸರ್ಕಾರದ ರಾಜ್ಯ ಪತ್ರದಲ್ಲಿ ಪ್ರಕಟಿಸಿದ ದಿನಾಂಕದಿಂದ 15 ದಿನಗಳ ಒಳಗೆ ಸಲ್ಲಿಸುವಂತೆ ತಿಳಿಸಲಾಗಿತ್ತು,

ಸದರಿ ಗೆಜೆಟ್ ಅನ್ನು 13.03.2024 ರಂದು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಲಾಗಿದೆ.

ಮೇಲೆ ನಿರ್ದಿಷ್ಟಪಡಿಸಿದ ಅವಧಿಯಲ್ಲಿ ರಾಜ್ಯ ಸರ್ಕಾರವು ಯಾವುದೇ ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಸ್ವೀಕರಿಸಿರುವುದಿಲ್ಲ.

ಈಗ ಕರ್ನಾಟಕ ಸರ್ಕಾರವು ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರ ಕಾಯ್ದೆ,2009, (ಕರ್ನಾಟಕ ಅಧಿನಿಯಮ 10, 2009) ಸೆಕ್ಷನ್ 45(1) ರ ಮೂಲಕ ನೀಡಲಾದ ಅಧಿಕಾರಗಳನ್ನು ಚಲಾಯಿಸಿ, ಪ್ರಸ್ತಾಪಿಸಿರುವ ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರ ಕಾಯ್ದೆ, 2009 ರಲ್ಲಿ ) ಕರ್ನಾಟಕ ಸರ್ಕಾರವು ಈ ಕೆಳಗಿನ ನಿಯಮಗಳನ್ನು ರೂಪಿಸುತ್ತದೆ, ಅವುಗಳೆಂದರೆ;

## ನಿಯಮಗಳು

ಅಧ್ಯಾಯ-1

### 1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ :-

(1) ಈ ನಿಯಮಗಳನ್ನು ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರನಿಯಮಗಳು, 2024 ಎಂದು ಕರೆಯತಕ್ಕದ್ದು

(2) ಈ ನಿಯಮಗಳು ಅಧಿಕೃತ ರಾಜ್ಯ ಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ ಜಾರಿಗೆ ಬರತಕ್ಕದ್ದು

**2. ಪರಿಭಾಷೆಗಳು(ಪ್ರಪತ್ರ)** :- ಈ ನಿಯಮಗಳಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು-

(ಎ) "ಅಧಿನಿಯಮ" ಎಂದರೆ ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ 2009 (2009 ಕರ್ನಾಟಕಅಧಿನಿಯಮ ಸಂಖ್ಯೆ 10) ;

(ಬಿ) ಪ್ರಕರಣ ಎಂದರೆ ಈ ಅಧಿನಿಯಮದ ಪ್ರಕರಣ; ಮತ್ತು

(ಸಿ) "ಪ್ರಪತ್ರ" ಎಂದರೆ ಈ ನಿಯಮಳಿಗೆ ಅನುಬಂಧಿಸಲಾದ ಪ್ರಪತ್ರ.

**3. ಸರ್ಕಾರೇತರ ಸದಸ್ಯರುಗಳಿಗೆ ಪ್ರಯಾಣ ಭತ್ಯೆ :-**
ಸರ್ಕಾರೇತರ ಸದಸ್ಯರ ಸೇವಾ ಪ್ರಯಾಣ ಭತ್ಯೆ ಮತ್ತು ಉಪಸ್ಥಿತಿ ಭತ್ಯೆಗಳನ್ನು ಕರ್ನಾಟಕ ಸರ್ಕಾರ ಸೇವಾ
ನಿಯಾಮಾವಳಿ ಅನುಬಂಧ 'ಎ' ರನ್ವಯ ಸರ್ಕಾರ ಕಾಲಕಾಲಕ್ಕೆ ನಿಗದಿ ಪಡಿಸುವ ದರಗಳನ್ವಯ ಪಡೆಯಲು ಅರ್ಹರಾಗಿರತಕ್ಕದ್ದು

**4. ಕರಾರುಗಳನ್ನು ಮಾಡಿಕೊಳ್ಳುವುದು :-**
ಪ್ರಾಧಿಕಾರದ ಪರವಾಗಿ ಅಥವಾ ಪ್ರಾಧಿಕಾರದ ಹೆಸರಿನಲ್ಲಿ ಕಾಮಗಾರಿಗಳನ್ನು ನಿರ್ವಹಿಸುವುದು ಅಥವಾ ಸಾಮಗ್ರಿಗಳನ್ನು ಸರಕುಗಳನ್ನು ಸರಬರಾಜು ಮಾಡುವ ಅಥವಾ ಸೇವೆಯನ್ನು ಸಲ್ಲಿಸುವ ಸಲುವಾಗಿ ಸರ್ಕಾರವು ಕಾಲ-ಕಾಲಕ್ಕೆ ರಚಿಸಿದ ಯಾವುದೇ ನಿಯಮಗಳು ಅಥವಾ ನಮೂನೆಗಳು ಇದ್ದರೆ, ಸಾಧ್ಯವಾದಷ್ಟು ಮಟ್ಟಿಗೆ ಮತ್ತು ಅಧಿನಿಯಮ ಮತ್ತು ಈ ನಿಯಮಗಳ ಉಪಬಂಧಗಳಿಗೆ ಅಸಂಗತವಾಗದಿರುವಷ್ಟರ ಮಟ್ಟಿಗೆ ಅವುಗಳನ್ನು ಅನುಸರಿಸತಕ್ಕದ್ದು ಮತ್ತು ಪ್ರಾಧಿಕಾರದ ಮುಂದಿನ ಸಭೆಯಲ್ಲಿ ಆಯುಕ್ತರು ಅದನ್ನು ಸಭೆಯ ಮುಂದೆ ಮಂಡಿಸತಕ್ಕದ್ದು, ಪ್ರಾಧಿಕಾರದ ಆಯುಕ್ತರ ಅಂತಹ ನಡವಳಿಗಳಲ್ಲಿ ಯಾವುದೇ ಮಾರ್ಪಾಡು ಮಾಡಲು ಅಥವಾ ರದ್ದುಪಡಿಸಲು ಪ್ರಾಧಿಕಾರವು ತೀರ್ಮಾನಿಸಿದ ದಿನಾಂಕದಿಂದ ನಡವಳಿಗಳು ಹಾಗೆ ಮಾರ್ಪಾಡಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗಿರತಕ್ಕದ್ದುಅಥವಾ ಸಂದರ್ಭಾನುಸಾರ ಪರಿಣಾಮಕಾರಿಯಾಗಿರತಕ್ಕದ್ದಲ್ಲ.

**5. ಪ್ರಾಧಿಕಾರವು ನಿಧಿಗಳನ್ನು ಪಡೆದುಕೊಳ್ಳುವುದಕ್ಕಾಗಿ ಷರತ್ತುಗಳು :-**
ರಾಜ್ಯ ಸರ್ಕಾರವು 8 ನೇ ಪ್ರಕರಣ (2) ನೇ ಉಪ-ಪ್ರಕರಣ (ಬಿ) ಖಂಡದ ಮೇರಗೆ ಪ್ರಾಧಿಕಾರವು ನಿಧಿಗಳನ್ನು ಪಡೆಯುವಾಗ ಸರ್ಕಾರವು ಷರತ್ತುಗಳನ್ನು ವಿಧಿಸಿ ಮಂಜೂರಾತಿಯನ್ನು ನೀಡತಕ್ಕದ್ದು.

**6. ಪ್ರಾಧಿಕಾರದ ನೌಕರರು :-**
(1) ಪ್ರಾಧಿಕಾರದ ಆಯುಕ್ತರು ಮತ್ತು ಇತರ ನೌಕರರ ಅರ್ಹತೆಗಳು, ನೇಮಕ ವಿಧಾನ ಮತ್ತು ಸೇವಾ ಷರತ್ತುಗಳು ಕರ್ನಾಟಕ ಸರ್ಕಾರಿ ನೌಕರರಿಗೆ ಸಮಾನವಾಗಿರತಕ್ಕದ್ದು.

(2) ಪ್ರಾಧಿಕಾರ ಸೃಜಿಸುವ ಪ್ರತಿಯೊಂದು ಹುದ್ದೆಯು, ಸರ್ಕಾರದ ಅಧೀನದಲ್ಲಿರುವ ಹುದ್ದೆಗೆ ಸಮಾನವಾಗಿರತಕ್ಕದ್ದು, ಪ್ರಾಧಿಕಾರವು ಪ್ರತಿಯೊಂದು ಹುದ್ದೆಯನ್ನು ಸರ್ಕಾರದ ಅನುಮೋದನೆ ಪಡೆದು ಸೃಜಿಸತಕ್ಕದ್ದು.

(3) ಪ್ರಾಧಿಕಾರದ ಪ್ರತಿಯೊಂದು ಹುದ್ದೆಯನ್ನು ಸಾಧ್ಯವಾದಷ್ಟು ಮಟ್ಟಿಗೆ ಕರ್ನಾಟಕ ಸರ್ಕಾರ ಅಥವಾ ಸರ್ಕಾರ ಅಥವಾ ಭಾರತದ ಇತರ ಯಾವುದೇ ರಾಜ್ಯ ಸರ್ಕಾರದವರ ನೌಕರರನ್ನುಅಥವಾ ಭಾರತದ ವ್ಯಾಪ್ತಿಯಲ್ಲಿ ಬರುವಂತಹ ಯಾವುದೇ ಸ್ವಾಯತ್ತ ಸಂಸ್ಥೆಯ ನೌಕರರನ್ನು ಪ್ರತಿನಿಯೋಜಿಸುವ ಮೂಲಕ ಭರ್ತಿ ಮಾಡತಕ್ಕದ್ದು

(4)ಪ್ರಾಧಿಕಾರದ ನೌಕರರಿಗೆ ಅನ್ವಯವಾಗುವ ವೇತನ ಶ್ರೇಣಿಗಳು, ಕರ್ನಾಟಕ ಸರ್ಕಾರದಲ್ಲಿರುವ ಸಮಾನ ಹುದ್ದೆಗಳಿಗೆ ಅನ್ವಯವಾಗುವ ವೇತನ ಶ್ರೇಣಿಗಳಾಗಿರತಕ್ಕದ್ದು

(5) ಪ್ರಾಧಿಕಾರದ ನೌಕರರು, ಈ ನಿಯಮಗಳಿಗೆ ಅಸಂಗತವಾಗಿರದಷ್ಟರ ಮಟ್ಟಿಗೆ ಕರ್ನಾಟಕ ಸಿವಿಲ್ ಸೇವಾ ನಿಯಮಗಳಿಗೆ ಒಳಪಡತಕ್ಕದ್ದು,

(6) ಪ್ರಾಧಿಕಾರದ ನೌಕರರು, ಕರ್ನಾಟಕ ಸಿವಿಲ್ ಸೇವಾ (ನಡತೆ) ನಿಯಮಗಳು, 2021ರ ಮತ್ತು ಪ್ರಾಧಿಕಾರವು ಕಾಲ-ಕಾಲಕ್ಕೆ ಅಧಿಸೂಚಸಬಹುದಾದಂತಹ ರಾಜ್ಯ ಸರ್ಕಾರಿ ನೌಕರರಿಗೆ ಅನ್ವಯವಾಗತಕ್ಕ ಇತರ ಸೇವಾ ನಿಯಮಗಳಿಗೆ ಒಳಪಡತಕ್ಕದ್ದು.

**7. ಪ್ರಾಧಿಕಾರದ ಟಿಪ್ಪಣಿಯ ವಿಷಯಗಳನ್ನು ತಿಳಿಯಪಡಿಸುವುದು :-**

(1) 16 ನೇ ಪ್ರಕರಣದ 1ನೇ ಉಪ ಪ್ರಕರಣದ ಮೇರೆಗೆ ಸುತ್ತೋಲೆ ಮೂಲಕ ಕಳುಹಿಸಬೇಕಾಗಿರುವ ಪ್ರಾಧಿಕಾರದ ಟಿಪ್ಪಣಿಯಲ್ಲಿ ವಿಷಯದ ವಾಸ್ತವಾಂಶಗಳನ್ನುತೀರ್ಮಾನದ ಅಂಶಗಳನ್ನು ಯಾವುದೇ ಪಕ್ಷಕಾರರೊಡನೆ ಸಮಾಲೋಚಿಸಿದ್ದರೆ ಪಕ್ಷಕಾರರ ಅಭಿಪ್ರಾಯಗಳನ್ನು ಮತ್ತು ಆಯುಕ್ತರ ಅಂತಿಮ ಶಿಫಾರಸ್ಸುಗಳನ್ನು ತಿಳಿಯಪಡಿಸತಕ್ಕದ್ದು

(2) ಪ್ರಾಧಿಕಾರದ ಇಂತಹ ಪ್ರತಿಯೊಂದು ಟಿಪ್ಪಣಿಗೂ ಆಯುಕ್ತರು ಸಹಿ ಮಾಡತಕ್ಕದ್ದು.

**8. ಪ್ರಾಧಿಕಾರವು ಸ್ಥಿರಾಸ್ತಿಗಳನ್ನು ಪರಭಾರೆ ಮಾಡುವ ಬಗ್ಗೆ ಷರತ್ತುಗಳು :-**

(1) ಪ್ರಾಧಿಕಾರದ ಯಾವುದೇ ಸ್ಥಿರಾಸ್ತಿಗಳನ್ನು ಹಾಗೂ ಒಂದು ಲಕ್ಷಕ್ಕೂ ಹೆಚ್ಚು ಬೆಲೆ ಬಾಳುವ ಚರಾಸ್ಥಿಗಳನ್ನು ಸರ್ಕಾರದ ಪೂರ್ವನುಮತಿ ಇಲ್ಲದೆ ಪರಭಾರೆ ಮಾಡತಕ್ಕದ್ದಲ್ಲ.

(2) ನಿರುಪಯುಕ್ತ ವಸ್ತುಗಳನ್ನು ಕರ್ನಾಟಕ ಸರ್ಕಾರದ ಆರ್ಥಿಕ ಸಂಹಿತೆ ನಿಯಮಗಳ ಅನುಸಾರ ಪ್ರಾಧಿಕಾರದ ಪೂರ್ವಾನುಮತಿಯೊಂದಿಗೆ ಮಾಡತಕ್ಕದ್ದು.

**9. ಆಯವ್ಯಯದ ನಮೂನೆ :-**

ಪ್ರತಿ ವರ್ಷದ ಡಿಸೆಂಬರ್ ತಿಂಗಳಲ್ಲಿ ಮುಂದಿನ ಆರ್ಥಿಕ ವರ್ಷದ ಬಜೆಟ್ಟನ್ನು ಪ್ರಾಧಿಕಾರವು ಸರ್ಕಾರದ ಆರ್ಥಿಕ ಇಲಾಖೆಯು ಗೊತ್ತುಪಡಿಸಲಾದ ನಮೂನೆಗಳಲ್ಲಿ ಅನ್ವಯವಾಗುವಷ್ಟು ಮಟ್ಟಿಗೆ ಅಂಥಹುದೆ ಅನುಬಂಧಗಳೊಡನೆ ತಯಾರಿಸತಕ್ಕದ್ದು.

**10. ಲೆಕ್ಕ ಪುಸ್ತಕಗಳು ಮತ್ತು ಇತರ ರಿಜಿಸ್ಟರಗಳ ನಮೂನೆ :-**

(1) ಕರ್ನಾಟಕ ಆರ್ಥಿಕ ಸಂಹಿತೆ 1958ರ ಉಪಬಂಧಗಳು ಮತ್ತು ಅದರ ಮೇರೆಗೆ ರಚಿಸಲಾದ ನಮೂನೆಗಳು ಸಮಯೋಚಿತ ಬದಲಾವಣೆಗಳೊಂದಿಗೆ ಪ್ರಾಧಿಕಾರವು ನಿರ್ವಹಿಸುವ ಲೆಕ್ಕಪತ್ರಗಳಿಗೆ ಅನ್ವಯವಾಗತಕ್ಕದ್ದು.

**11. ವರದಿಗಳು :-**

ಪ್ರಾಧಿಕಾರವು ಪ್ರತಿ ವರ್ಷ ಜುಲೈ ಅಂತ್ಯದ ಒಳಗಾಗಿ ಲೆಕ್ಕ ಪರಿಶೋಧನಾ ವರದಿಯನ್ನು ಸಲ್ಲಿಸತಕ್ಕದ್ದು, ಆದಾಗ್ಯೂ ಪ್ರಪತ್ರ ದಲ್ಲಿ ಸರ್ಕಾರ ನೇಮಿಸಲಾದ ವಿಷಯಗಳನ್ನು ಒಳಗೊಳ್ಳುವ ಮತ್ತು ಯೋಜಿಸಿದ ಕೈಗೊಂಡ ಮತ್ತು ಪೂರ್ಣಗೊಳಿಸಿದ ಪ್ರಧಾನ ಕಾರ್ಯಚಟುವಟಿಕೆಗಳು, ಹಣಕಾಸು ಪರಿಸ್ಥಿತಿ, ಸಿಬ್ಬಂದಿ ಮತ್ತು ಇತರ ಅದೇ ಬಗೆಯ ವಿಷಯಗಳನ್ನೊಳಗೊಂಡ ವಾರ್ಷಿಕ ಆಡಳಿತ ವರದಿಯನ್ನು ಸಿದ್ಧಪಡಿಸಿ ಪ್ರಾಧಿಕಾರದ ಅನುಮೋದನೆಗೆ ಬರೆಯತಕ್ಕದ್ದು ಮತ್ತು ಮುಂದಿನ ಪ್ರತಿಯೊಂದು ಹಣಕಾಸು ವರ್ಷಕ್ಕಾಗಿ ಜೂನ್ ಅಂತ್ಯದಲ್ಲಿ ಅದನ್ನು ಸರ್ಕಾರಕ್ಕೆ ಸಲ್ಲಿಸತಕ್ಕದ್ದು. ಸರ್ಕಾರವು ಅಂತ್ಯದ ವರದಿಯನ್ನು ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಿಸುವಂತೆ ಮಾಡಬಹುದು.

## ಪ್ರಪತ್ರ

(ನಿಯಮ 11ನ್ನು ನೋಡಿ)

-------------------- ವರ್ಷಕ್ಕಾಗಿ ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರದ ವಾರ್ಷಿಕ ಆಡಳಿತ ವರದಿ

**(ಎ) ಆಡಳಿತ:**

1. ಪ್ರಾಧಿಕಾರದ ರಚನೆ, ಅನರ್ಹಗೊಳಿಸುವಿಕೆ, ತೆಗೆದು ಹಾಕುವಿಕೆ ಇತ್ಯಾದಿ
2. ಪ್ರಾಧಿಕಾರದ ಸದಸ್ಯರ ಹೆಸರುಗಳು ಮತ್ತು ಪದನಿಮಿತ್ತ ಅಥವಾ ನಾಮನಿರ್ದೇಶಿತ ಅಥವಾ ನೇಮಕಗೊಂಡಂತೆ ಅವರ ಸಾಮರ್ಥ್ಯ.
3. ವರದಿಯ ವರ್ಷದಲ್ಲಿ ನಡೆಸಲಾದ ಪ್ರಾಧಿಕಾರದ ಸಭೆಗಳು ಮತ್ತುಅಗತ್ಯವಿರುವಷ್ಟು ಸಂಖ್ಯೆಯ ಸಭೆಗಳನ್ನು ನಡೆಸದಿರುವುದಕ್ಕೆ ಕಾರಣಗಳು
4. (ಎ) ವರದಿಯ ವರ್ಷದಲ್ಲಿ ನಡೆದ ಕಾರ್ಯಗೊಳಿಸುವ ಸಮಿತಿಯ ಸಭೆಗಳು ಮತ್ತುಅಗತ್ಯವಿರುವಷ್ಟು ಸಂಖ್ಯೆಯ ನಡೆಸದಿರುವುದಕ್ಕೆ ಕಾರಣಗಳು
   (ಬಿ) ನಿರಂತವಾಗಿ ಅಥವಾ ಹೆಚ್ಚು ಸಭೆಗಳಿಗೆ ಗೈರು ಹಾಜರಾದ ಪ್ರಾಧಿಕಾರದ ಮತ್ತು ಕಾರ್ಯಗತಗೊಳಿಸುವ ಸಮಿತಿಯ ಸದಸ್ಯರ ಪಟ್ಟಿ.
5. ಪ್ರಾಧಿಕಾರದ ಸಮಿತಿಗಳ ಮತ್ತು ಉಪಸಮಿತಿಗಳ ರಚನೆ
6. ಪ್ರತಿಯೊಂದು ಸಮಿತಿ/ಉಪಸಮಿತಿಗೆ ಪ್ರತ್ಯೇಕವಾಗಿ ನಡೆಸಲಾದ ಸಭೆಗಳ ಸಂಖ್ಯೆ
7. ವ್ಯವಸ್ಥಾಪಕ ಸಿಬ್ಬಂದಿ (ಸಿಬ್ಬಂದಿಯ ಪಟ್ಟಿಯನ್ನು ಲಗತ್ತಿಸಲಾಗಿದೆ)
8. ಪ್ರಾಧಿಕಾರದ ಮತ್ತು ಸಿಬ್ಬಂದಿಗೆ ಸ್ಥಳಾವಕಾಶ.
9. ಪೀಠೋಪಕರಣಗಳು ಮತ್ತು ಕಛೇರಿ ಸಾಮಗ್ರಿಗಳು
10. ಮೇಲೆ ಬಾಬ್ತು 8ರಲ್ಲಿ ತೋರಿಸಿರುವ ಹೊರತಾಗಿ ಸ್ಥಿರಾಸ್ತಿ
11. ಮೋಟಾರು ವಾಹನಗಳು, ಉಪಕರಣಗಳು ಮತ್ತು ಸ್ಥಾವರಗಳು
12. ಪುಸ್ತಕಗಳು ಮತು ಪ್ರಪತ್ರಗಳು ಮತ್ತುದಾಖಲೆ ಪತ್ರಗಳ ನಿರ್ವಹಣೆಗಾಗಿ ಸೌಲಭ್ಯ
13. ಹಣ ಮತ್ತು ಬೆಲೆಬಾಳುವ ದಸ್ತಾನುವೇಜು ಮತ್ತು ದಾಖಲೆ ಪತ್ರಗಳ ಭದ್ರತೆ ಮತ್ತು ಸುರಕ್ಷತೆ ಮತ್ತು ಅಭಿರಕ್ಷೆ

**(ಬಿ) ಬಜೆಟ್ ಮತ್ತು ಯೋಜನೆಗಳು**

14. ವರ್ಷದ ವಾಸ್ತವಿಕ ಸ್ವೀಕೃತಿಗಳು ಮತ್ತು ವೆಚ್ಚಗಳು

| ಕಾಮಗಾರಿಯ ಹೆಸರು ಎಂದರೆ ಕಟ್ಟಡಗಳು, ಯೋಜನೆಗಳು: ಸೇವೆಗಳು | ವೆಚ್ಚ ವಾಸ್ತವಿಕ ಪ್ರಗತಿ ಹಿಂದಿನ ವರ್ಷದವರೆಗೆ | ಪ್ರಸಕ್ತ ವರ್ಷದಲ್ಲಿ |
|---|---|---|
| (1) | (2) | (3) |

15. ಮೇಲಿನ ಬಾಬ್ತು 14ಕ್ಕೆ ಸಂಬಂಧಿಸಿದಂತೆ ಪ್ರಗತಿಯು ಕುಂಠಿತವಾದುದಕ್ಕೆ ಕಾರಣಗಳು
16. ಯೋಜನೆಗಳು ಮತ್ತು ಸ್ಕೀಮುಗಳು ಪರಿಷ್ಕರಣೆ ಮತ್ತು ಅವು ಯಾವುದಾದರೂ ಇದ್ದರೆ ಅವುಗಳನ್ನು ಕಾರಣ ಸಹಿತ ಕಳುಹಿಸಿ ಕೊಡುವುದು.
17. ತಪ್ಪಿತಸ್ಥರ ಎಜೆನ್ಸಿಗಳು, ಇಲಾಖೆಗಳು ಇತ್ಯಾದಿ ಮತ್ತು ಅವುಗಳ ಮೇಲೆ ತೆಗೆದುಕೊಂಡಿರುವ ಕ್ರಮ

18. ಪ್ರಾಧಿಕಾರದ ನಿಧಿಯ ಪ್ರಸ್ತುತ ಸ್ಥಿತಿ

(ಎ) ಖಜಾನೆಯ ನಿಧಿಯನ್ನು ಇಡಲಾಗಿರುವ ಬ್ಯಾಂಕಿನ ಹೆಸರುಗಳು.

(ಬಿ) ಖಾತೆ ಸಂಖ್ಯೆ ಮತ್ತು ಅದರ ಸ್ವರೂಪ

(ಸಿ) ಶಿಲ್ಕು

19. ನಿರ್ವಹಿಸಲಾಗಿರುವ ಲೆಕ್ಕಗಳ ಮತ್ತು ಮಾಡಲಾಗಿರುವ ಲೆಕ್ಕಪರಿಶೋಧನೆಗಳ ಸ್ಥಿತಿಗಳು

20. ವರ್ಷದ ಅವಧಿಯಲ್ಲಿ ಹಣ ದುರಪಯೋಗ, ಮೋಸಗಳು, ನಷ್ಟ ಆಸ್ತಿ ಹಾನಿ, ಅತಿಕ್ರಮಣ/ ಕಸಿದುಕೊಳ್ಳುವಿಕೆ/ ಕಳ್ಳತನ ಯಾವುದಾದರೂ ಆಗಿದ್ದರೆ ಅದಕ್ಕಾಗಿ ತೆಗೆದುಕೊಳ್ಳಲಾದ ಕ್ರಮಗಳು ಮತ್ತು ಪರಿಹಾರ ಕ್ರಮಗಳು

21. ಆಯುಕ್ತರು ಮತ್ತು ಇತರ ಪ್ರಾಧಿಕೃತ ಏಜೆನ್ಸಿಗಳು / ಅಧಿಕಾರಿಗಳು ನಡೆಸಿದ ಯೋಜನೆಗಳ ತಪಾಸಣೆಗಳ ಸಂಖ್ಯೆ ಮತ್ತು ಅದರ ಮೇಲೆ ನೀಡಿದ ಟಿಪ್ಪಣಿಗಳು ಮತ್ತು ಸಂಬಂಧಪಟ್ಟ ಕಾರ್ಯನಿರ್ವಾಹಕ ಏಜೆನ್ಸಿಯು ತೆಗೆದುಕೊಂಡ ಕ್ರಮಗಳು

22. ಮಹತ್ವದ ಷರಾಗಳಿಂದ ಬೇರೆ ಇತರೆ ಯಾವುದೇ ವಿಷಯಗಳು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಕಲಾವತಿ.ಎಸ್.ಎನ್)
ಸರ್ಕಾರದ ಉಪ ಕಾರ್ಯದರ್ಶಿ
ಕಂದಾಯ ಇಲಾಖೆ
[ಸಮನ್ವಯ, ಸೇವೆಗಳು-2 ಮತ್ತು ಮಂ & ಪ್ರಾ]

GOVERNMENT OF KARNATAKA

No: RD 21 REH 2020

karnataka Government secretariat
Multi Stored Building
Bengaluru, Dated:-28.08.2024

## Notification

Where the draft of the following rules further to amend the Kaginele Development Authority Act, 2009, which the Government of Karnataka, proposes to make in exercise of the powers conferred by section 45(1) of the Kaginele Development Authority Act, 2009, (Karnataka Act 10 of 2009) is hereby published as required by sub-section (1) of the said section, vide Notification NO, RD 21 REH 2020, Dated 01.03.2024, in part IV-A of the Of the Karnataka Gazzete dated 1303.2024 inviting objections and suggestions from all the persons likely to be affected there by with in fifteen days from the date of its publication in the official gazette

Where the said gazette was made available to the public on 13.03.2024

And where as no objections and suggestions have been received by the state govt within the period of specified above

Now therefore in exercise the powers conferred by section 45(1) of the Kaginele Development Authority Act, 2009, (Karnataka Act 10 of 2009) the Govt of Karnataka here by makes the following rules, Namely;

## RULES

### CHAPTER-1

1. **Short title and Commencement:**
2. These rules may be called the Kaginele Development Authority Rules, 2024.
3. They shall come into force with effect from the date of their publication in the official gazette.
4. **Definitions:** In these rules, unless the context otherwise requires ,-

a. **"Act"** means the kaginele Development Authority Act, 2009. ( Karnataka Act No. 10 of 2009)
b. **"Section"** means section of the Act; and
c. **"Proforma"** means proforma appended to these rules.

3. **Travelling Allowance to Non-Official Members:** The Non- Official members shall entitle to get Travelling Allowance and sitting Allowance at the rates fixed by the Government from time to time as per Annexure "A" of the Karnataka Government Service Rules.

4. **Execution of Contracts:** In order to execute the works or supply any materials, goods or render services on behalf of or in favour of the Authority, the rules and

forms, if any, made by the Government from time to time, shall be followed, as far as practicable, and to the extent that they are not inconsistent with the provisions of the Act and these rules. The Commissioner shall place the same before next meeting of the Authority. If the Authority decides to do any modification or annual the proceedings of the Commissioner, the proceedings shall have effect only in such modified form or shall not have effect as the case may be from the date of the decision of the Authority modifying or annulling the proceedings of the Commissioner.

5. **Conditions for receiving funds by the Authority:** The State Government may, at the time of according sanction under clause (b) of sub-section (2) of Section 8 for receiving funds by the Authority, impose such conditions by the Government to Authority.
6. **Employees of the Authority:** (1) The qualifications, mode of appointment and conditions of service of the Commissioner and other employees of the Authority shall be equivalent to that of Karnataka Government Employees.

(2) Every post created by the Authority shall be equivalent to a post under the Government. The Authority shall create each post with the approval of the Government.

(3) Every post under the Authority shall as far as practicable, be filled by deputation of employees of the Government of Karnataka or the Union Government or any other State Government in India or of the employees of any autonomous body within the limits of India.

(4) The pay scales applicable to the employees of the Authority shall be the pay scales applicable to equivalent posts under the Government of Karnataka.

(5) The Karnataka Civil Service Rules shall apply to employees of the Authority as far as they are not inconsistent with these rules.

(6) The employees of the Authority shall be governed by the Karnataka Civil Service (Conduct) Rules, 2021 and such other service rules applicable to the employees of the State Government, as may be notified by the Authority from time to time.

7. **Disclosure of contents in the note of the Authority:**

   1. Under sub- sections 1 of section 16, if consultation is made with any parties about facts of the subject and decision, then, the opinion of the parties and final recommendations of the Commissioner shall be disclosed in note of the Authority to be sent through circular.
   2. The Commissioner shall affix his signature on every such note of the Authority.

8. **Conditions regarding selling of immovable property of the Authority:**
   1. No immovable property and movable property of the Authority worth more than one lakh shall be alienated without prior permission of the Government.
   2. The waste materials shall be sold as per the Karnataka Government Financial Code with prior permission of the Authority.
9. **Form of the Budget:**

At the month of December every year, the Authority shall prepare a budget of next financial year, with annexures, as far as applicable similar to the form prescribed by the Finance Department of the Government.

**10.Account Books and other Forms of registers:**

(1) The provisions of the Karnataka Financial Code, 1958 and the forms framed mutatis mutandis there under shall be applicable to the accounts of the Authority.

**11. Reports:** The Authority shall submit an audit report within the end of July, every year. However, an Annual Administrative Report comprising the matters prescribed by the Government in Proforma and major activities planned, undertaken and completed, financial position, staff and powers and other similar matters, shall be prepared and get approved by the Board and it shall be submitted to the Government at the end of June for the each forthcoming financial year. The Government may cause to be published such report in the Official Gazette

## Proforma

(See Rule 11)

Annual Administrative Report of the Kaginele Development Authority for the year. . . . . . .

**A. Administration:**

1. Constitution of the Authority, disqualification, removal, etc.
2. Names of members of the Authority and their capacity as and Ex-officio or nominated or appointed members.
3. Number of meetings of Authority held during the report year and reasons for not conducting such number of meetings as may be required.
4. (a) Number of Meetings of Executive Committee held during the reporting year and reasons for not conducting such number of meetings as may be required.

(b) List of members of the Authority and the Executive Committee who remained absent for the consecutive meetings or more number of meetings.

5. Constitution of Committees and Sub-Committees of the Authority.
6. Number of meetings held separately for every Committee / Sub-committee.
7. Officers and employees of the Authority (list enclosed).
8. Premises of the Authority and its officers and employees.
9. Furnitures and Office materials.
10. Immovable property other than shown in the above item 8.
11. Motor vehicals, equipments and immovable objects.
12. Maintenance of books and proformas / forms and records.
13. Security, safety and custody of cash, valuable documents and important records.

**(b) Budget and schemes:**

(14) Annual Receipts and Expenditure

| Name of the works Buildings/ Schemes/ Services | Physical progress of Expenditure till the end of last year | Expenditure during current year |
|---|---|---|
| (1) | (2) | (3) |

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



(15) Reasons for slow pace progress of the works as referred in item 14.

(16) Revision of Schemes and projects, if any, shall be sent with reason.

(17) Agencies, departments etc, which committed default and dereliction of the duty and action shall be taken against such agencies and departments.

(18) Present status of the Authority's Fund-

I (a) Names of the bank in which fund of the treasury is deposited.

(b) Bank account number and nature of bank account.

(c) Balance.

(19) Maintenance of accounts and audit and their stage.

(20) Cases of action taken or recommendation made in the cases such as misappropriation of money and financial loss, loss of property, encroachment of property during the financial year.

(21) The Commissioner shall inspect the schemes executed by the authorised agencies along with the officers of his office and the authorised agencies, and execute the works by making notes of the schemes.

(22) Any other important matter with remarks.

By order and in the name of
Governor of Karnataka

**(KALAVATHI S.N)**
Deputy Secretary to Government
Revenue Department
(Co-ordination, Services-2 and
Boards and Authorities)

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

THAMMAIAH